ಕರ್ನಾಟಕ ಸರ್ಕಾರ
ಸಾರಿಗೆ ಇಲಾಖೆ

ಸಂ.ಸಾಆ/ನೋಂದಣಿ-2/ಪಿಆರ್- 206/2004-05

ಸಾರಿಗೆ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:2-2-2010

ಇವರಿಗೆ

ರಾಜ್ಯದ ಎಲ್ಲಾ ಜಂಟಿ ಸಾರಿಗೆ ಆಯುಕ್ತರು
ಉಪ ಸಾರಿಗೆ ಆಯುಕ್ತರು / ಪ್ರಾದೇಶಿಕ ಮತ್ತು
ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು.

ಮಾನ್ಯರೆ,

ವಿಷಯ: ಕರ್ನಾಟಕ ಮೋಟಾರು ವಾಹನ ನಿಯಮಗಳ ನಿಯಮ 46-ಎ ಗೆ ತಿದ್ದುಪಡಿ ತರುವ ಕುರಿತು.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂ.ಸಾರಿಇ 243 ಸಾಇಪ 2008 ದಿನಾಂಕ: 2-2-2010.

**

ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989ರ ನಿಯಮ 46-ಎ ಗೆ ತಿದ್ದುಪಡಿ ಮಾಡಿ ಹೊರಡಿಸಿರುವ ಉಲ್ಲೇಖಿತ ಅಂತಿಮ ಅಧಿಸೂಚನೆಯ ಪ್ರತಿಯನ್ನು ಈ ಪತ್ರದೊಂದಿಗೆ ಲಗತ್ತಿಸಿ ಕಳುಹಿಸುತ್ತಾ, ಸದರಿ ಅಧಿಸೂಚನೆಯ ಪ್ರಕಾರ, ಈ ತಿದ್ದುಪಡಿ ನಿಯಮಗಳು ದಿನಾಂಕ:3-2-2010ರ ವಿಶೇಷ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರುವುದಾಗಿ ತಿಳಿಸಲಾಗಿದೆ. ಅದರಂತೆ, ಕರ್ನಾಟಕ ಮೋಟಾರು ವಾಹನಗಳ ತಿದ್ದುಪಡಿ ನಿಯಮ 2009ರ ಪ್ರಕಾರ, ನಿಯಮ 46-ಎ ಗೆ ತಿದ್ದುಪಡಿ ಮೂಲಕ ದಿನಾಂಕ:3-2-2010ರಿಂದ ಅನ್ವಯವಾಗುವಂತೆ ಈ ಕೆಳಕಂಡಂತೆ ಪರಿಷ್ಕರಿಸಲಾಗಿರುವ ಶುಲ್ಕವನ್ನು ವಸೂಲು ಮಾಡುವ ಕ್ರಮ ವಹಿಸುವಂತೆ ತಿಳಿಸಲಾಗಿದೆ.

(ಶುಲ್ಕ ರೂ.ಗಳಲ್ಲಿ)

| ವಾಹನ ವರ್ಗ | ಪ್ರಸ್ತುತ ಜಾರಿಯಲ್ಲಿರುವ ಶುಲ್ಕ | | ಪರಿಷ್ಕರಿಸಿದ ಶುಲ್ಕ | |
|---|---|---|---|---|
| | ಚಾಲ್ತಿ ಶ್ರೇಣಿ | ಮುಂಗಡ ಶ್ರೇಣಿ | ಚಾಲ್ತಿ ಶ್ರೇಣಿ | ಮುಂಗಡ ಶ್ರೇಣಿ |
| ದ್ವಿ ಚಕ್ರ ವಾಹನಗಳು | 3000 | 25000 | 6000 | 25000 |
| ಲಘು ಮೋಟಾರು ವಾಹನಗಳು | 6000 | 25000 | 20000 | 75000 |
| ಇತರೆ ವಾಹನಗಳು | 9000 | 25000 | 30000 | 75000 |

ತಮ್ಮ ವಿಶ್ವಾಸಿ,

ಸಾರಿಗೆ ಆಯುಕ್ತರು
ಬೆಂಗಳೂರು

# ಕರ್ನಾಟಕ ಸರ್ಕಾರ

ಸಂ:ಸಾರಿಇ 243 ಸಾಇಪ 2008

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:02.02.2010

## ಅಧಿಸೂಚನೆ

ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, 1989 ರನ್ನು ಮತ್ತಷ್ಟು ತಿದ್ದುಪಡಿ ಮಾಡಲು ಕರ್ನಾಟಕ ಸರ್ಕಾರವು ಉದ್ದೇಶಿಸಿದ್ದು, ಮೋಟಾರು ವಾಹನಗಳ ಅಧಿನಿಯಮ 1988 (ಕೇಂದ್ರ ಅಧಿನಿಯಮ 59/1988) ರ ಸೆಕ್ಷನ್ 65, 211 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಅಧಿನಿಯಮದ ಸೆಕ್ಷನ್ 212 (1) ರಲ್ಲಿ ಪ್ರಕಟಿಸುವ ಅವಶ್ಯವಿರುವುದರಿಂದ ಅಧಿಸೂಚನೆ ಸಂಖ್ಯೆ ಸಾರಿಇ 243 ಸಾಇಪ 2008 ದಿನಾಂಕ:5-12-2009 ರ ಮೂಲಕ ದಿನಾಂಕ:7-12-2009 ರ ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ-4 ಎ ಸಂಖ್ಯೆ 1154 ರಲ್ಲಿ ಪ್ರಕಟಿಸಿ, ಇದರಿಂದ ಭಾದಿತರಾಗಿರುವ ಹಾಗೂ ಇತರೆ ಸಾರ್ವಜನಿಕರಿಂದ ಆಕ್ಷೇಪಣೆ ಸಲಹೆಗಳನ್ನು ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 30 ದಿನಗೊಳಗಾಗಿ ನೀಡುವಂತೆ ಆಹ್ವಾನಿಸಲಾಗಿತ್ತು;

ಸದರಿ ರಾಜ್ಯಪತ್ರವನ್ನು ದಿನಾಂಕ: 7-12-2009 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಲಾಗಿತ್ತು.

ರಾಜ್ಯ ಸರ್ಕಾರಕ್ಕೆ ಈ ಬಗ್ಗೆ ಸಾರ್ವಜನಿಕರಿಂದ ಬಂದ ಆಕ್ಷೇಪಣೆ/ ಸಲಹೆಗಳನ್ನು ಪರಿಗಣಿಸಲಾಯಿತು.

..2

ಆದ್ದರಿಂದ ಸರ್ಕಾರವು ಮೋಟಾರು ವಾಹನಗಳ ಅಧಿನಿಯಮ, 1988 ರ (ಕೇಂದ್ರ ಅಧಿನಿಯಮ 59/1988) ಸೆಕ್ಷನ್ 65, 211 ರೊಂದಿಗೆ ಓದಿಕೊಂಡಂತೆ ಕಲಂ 212 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ಜಾರಿಗೆ ತಂದಿದೆ, ಯಾವುದೆಂದರೆ;

<u>ನಿಯಮಗಳು</u>

1. **ಶೀರ್ಷಿಕೆ ಮತ್ತು ಪ್ರಾರಂಭ:-** 1) ಈ ನಿಯಮವನ್ನು ಕರ್ನಾಟಕ ಮೋಟಾರು ವಾಹನಗಳ (ತಿದ್ದುಪಡಿ) ನಿಯಮಗಳು 2009 ಎಂದು ಕರೆಯುವುದು.

2. ಈ ತಿದ್ದುಪಡಿ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರುವುದು.

2. **ನಿಯಮ 46-ಎ ಗೆ ತಿದ್ದುಪಡಿ :-** ಕರ್ನಾಟಕ ಮೋಟಾರು ವಾಹನ ನಿಯಮಾವಳಿ 1989 ರ ನಿಯಮ 46-ಎ ನಲ್ಲಿ (ಇನ್ನುಮುಂದೆ ಇದೇ ನಿಯಮಾವಳಿ ಎಂದು ಉಲ್ಲೇಖಿತ)

i) ಉಪನಿಯಮ (1) ರಲ್ಲಿ "ಹಿಂಪಾವತಿಸಲಾಗದಂತಹ ಶುಲ್ಕವಾಗಿ ದ್ವಿಚಕ್ರ ವಾಹನಗಳಿಗೆ ಮೂರು ಸಾವಿರ ರೂಪಾಯಿಗಳು, ಲಘು ಮೋಟಾರು ವಾಹನಗಳಿಗೆ (ಸಾರಿಗೆ ಮತ್ತು ಸಾರಿಗೇತರ ವಾಹನಗಳಿಗೆ) ಆರು ಸಾವಿರ ರೂಪಾಯಿಗಳು ಮತ್ತು ಇತರೆ ವಾಹನಗಳಿಗೆ ಒಂಬತ್ತು ಸಾವಿರ ರೂಪಾಯಿಗಳು" ಎಂಬ ಪದಗಳಿಗೆ ಬದಲಾಗಿ "ಹಿಂಪಾವತಿಸಲಾಗದಂತಹ ಶುಲ್ಕವಾಗಿ ದ್ವಿಚಕ್ರ ವಾಹನಗಳಿಗೆ ಆರು ಸಾವಿರ ರೂಪಾಯಿಗಳು, ಲಘು ಮೋಟಾರು ವಾಹನಗಳಿಗೆ (ಸಾರಿಗೆ ಮತ್ತು ಸಾರಿಗೇತರ ವಾಹನಗಳಿಗೆ) ಇಪತ್ತು ಸಾವಿರ ರೂಪಾಯಿಗಳು ಮತ್ತು ಇತರೆ ವಾಹನಗಳಿಗೆ ಮೂವತ್ತು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಬದಲಾವಣೆ ಮಾಡತಕ್ಕದ್ದು.

ii) ಉಪ ನಿಯಮ (1) ರ ನಂತರ ಪರಂತುಕದಲ್ಲಿ "ಹಿಂಪಾವತಿಸಲಾಗದಂತಹ ಶುಲ್ಕ ಇಪತ್ತೈದು ಸಾವಿರ ರೂಪಾಯಿಗಳು" ಎಂಬ ಪದಗಳಿಗೆ ಬದಲಾಗಿ "ಹಿಂಪಾವತಿಸಲಾಗದಂತಹ ಶುಲ್ಕ ದ್ವಿಚಕ್ರ ವಾಹನಗಳಿಗೆ ಇಪತ್ತೈದು ಸಾವಿರ ರುಪಾಯಿಗಳು ಮತ್ತು ಇತರೆ ವಾಹನಗಳಿಗೆ (ಸಾರಿಗೆ ಮತ್ತು ಸಾರಿಗೇತರ ವಾಹನಗಳಿಗೆ) ಎಪತ್ತೈದು ಸಾವಿರ ರೂಪಾಯಿಗಳು" ಎಂಬ ಪದಗಳನ್ನು ಬದಲಾವಣೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಟಿ.ಎನ್.ನರಸಿಂಹರಾಜು)
ಪೀಠಾಧಿಕಾರಿ,(ಪ್ರ)
ಸಾರಿಗೆ ಇಲಾಖೆ.
[080-22032014]

ಇವರಿಗೆ:-

ಸಂಕಲನಾಧಿಕಾರಿ, ಕರ್ನಾಟಕ ವಿಶೇಷ ರಾಜ್ಯಪತ್ರ, ಬೆಂಗಳೂರು ಇವರಿಗೆ ದಿನಾಂಕ: 3-2-2010 ರ ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ 200 ಪ್ರತಿಗಳನ್ನು ಪೀಠಾಧಿಕಾರಿ ಸಾರಿಗೆ ಇಲಾಖೆ ಬಹುಮಹಡಿ ಕಟ್ಟಡ ಬೆಂಗಳೂರು ಇವರಿಗೆ ಕಳುಹಿಸುವಂತೆ ಕೋರಿದೆ.

1) ಮಹಾಲೇಖಪಾಲರು ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ, ಬೆಂಗಳೂರು.
3) ಜಂಟಿ/ಉಪ /ಜಂಟಿ ಸಾರಿಗೆ ಆಯುಕ್ತರು, ಸಾರಿಗೆ ಇಲಾಖೆ ಬೆಂಗಳೂರು.
4) ಎಲ್ಲಾ ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,

ಪ್ರತಿ:-

1) ಸರ್ಕಾರದ ಉಪ/ಅಧೀನ ಕಾರ್ಯದರ್ಶಿ, ಸಾರಿಗೆ ಇಲಾಖೆ.
2) ಸರ್ಕಾರದ ಕಾರ್ಯದರ್ಶಿ ಯವರ ಆಪ್ತ ಸಹಾಯಕರು, ಸಾರಿಗೆ ಇಲಾಖೆ
3) ಹೆಚ್ಚುವರಿ ಪ್ರತಿ/ಶಾಖಾ ರಕ್ಷಾ ಕಡತ.